## ದಿನಾಂಕ:29-07-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 4(60)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವೈಟ್ ಫೀಲ್ಡ್ – ಕೃಷ್ಣರಾಜಪುರ ಮಧ್ಯೆ ಬರುವ ಹೂಡಿ ಹತ್ತಿರವಿರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ 133 ರ ಬಳಿ ರೈಲ್ವೆ ಮೇಲು ಸೇತುವೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ, ಉದ್ದೇಶಿತ ಸ್ಥಳದಲ್ಲಿರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ನ್ನು ಮುಚ್ಚಿಸುವ ಅಗತ್ಯವಿದ್ದು, ಸಾರ್ವಜನಿಕರ ಹಾಗೂ ವಾಹನ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಈ ಕಾಮಗಾರಿಯನ್ನು 2009-10 ನೇ ಸಾಲಿನ ರೈಲ್ವೆ ಆಯವ್ಯಯದಲ್ಲಿ ಸೇರ್ಪಡಿಸಿದ್ದು, ಕಾಮಗಾರಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಸಹಭಾಗಿತ್ವದಲ್ಲಿ (ಕಾಸ್ಟ್ ಷೇರಿಂಗ್ ಆಧಾರದ ಮೇಲೆ) ನಿರ್ವಹಿಸಬೇಕಾಗಿರುತ್ತದೆ.

ದಿನಾಂಕ:27-01-2010 ರಂದು ನೈರುತ್ಯ ರೈಲ್ವೆ ಇಲಾಖೆಯವರು ಸದರಿ ಸ್ಥಳದಲ್ಲಿ ಒಂದು ಮೇಲುಸೇತುವೆಯನ್ನು ನಿರ್ಮಾಣ ಮಾಡಲು ಮೂರು ವಿಧದ ಅಲೈನ್ಮೆಂಟ್‌ಗಳನ್ನು ಅಳವಡಿಸಿ ತಯಾರಿಸಿದ ಒಂದು ಮಾದರಿ ನಕ್ಷೆಯನ್ನು ಪಾಲಿಕೆಯ ಅನುಮೋದನೆ ಕೋರಿ ಸಲ್ಲಿಸಿದ್ದು, ಈ ವಿಷಯದ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಸಲುವಾಗಿ ದಿನಾಂಕ:17-02-2010 ರಂದು ನೈರುತ್ಯ ರೈಲ್ವೆ ಇಲಾಖೆ ಅಧಿಕಾರಿಗಳೊಂದಿಗೆ ಪಾಲಿಕೆಯ ಅಧಿಕಾರಿಗಳು ಜಂಟಿಯಾಗಿ ತಪಾಸಣೆ ನಡೆಸಿ ಕಾಮಗಾರಿ ಕೆಲಸಕ್ಕೆ ದಿನಾಂಕ:06-05-2010 ರಂದು ರೈಲ್ವೆ ಇಲಾಖೆಯವರು ಪಾಲಿಕೆಯ ಅನುಮೋದನೆ ಕೋರಿ ಸಲ್ಲಿಸಿದ ಜಿ.ಎ.ಡಿಯ ಮೂರು ಮಾದರಿ ನಕ್ಷೆ ಪ್ರಸ್ತಾವನೆಯಲ್ಲಿ ಪ್ರಸ್ತಾವನೆ ಸಂಖ್ಯೆ (2) ರ ನಕ್ಷೆಯಂತೆ ಕಾಮಗಾರಿ ನಿರ್ವಹಿಸುವುದು ಸೂಕ್ತವೆಂದು ಪಾಲಿಕೆಯ ವತಿಯಿಂದ ಅನುಮೋದನೆ ನೀಡಿದ್ದು, ಅದರಂತೆ ಜಿ.ಎ.ಡಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ.

ಸದರಿ ಜಿ.ಎ.ಡಿ ಪ್ರಕಾರ ಮೇಲ್ಸೇತುವೆಯು 2 ಪಥದ ದ್ವಿಮುಖದ ಸಂಚಾರದ ರಸ್ತೆಯನ್ನು ಹೊಂದಿದ್ದು, 5 ಪಿಯರ್‌ಗಳನ್ನು ಒಳಗೊಂಡ ಮೇಲುಸೇತುವೆಯ ಮುಖ್ಯ ಸ್ಪ್ಯಾನ್ 34.40 ಮೀ ಉದ್ದವಿದ್ದು, ಸ್ಕ್ಯೂ ಆಕಾರದಲ್ಲಿ ನಿರ್ಮಿಸಲು ಉದ್ದೇಶಿಸಿದೆ ಮತ್ತು ಹೂಡಿ ವೃತ್ತದ ಕಡೆ 48.80 ಮೀ ಉದ್ದ ಹಾಗೂ ಕೆ.ಆರ್.ಪುರಂ ಕಡೆ 24.40 ಮೀ ಉದ್ದದ ಸೇತುವೆ ಒಳಗೊಂಡಂತೆ ಒಟ್ಟಾರೆ 77.60 ಮೀ ಉದ್ದದ ಮೇಲುಸೇತುವೆಯನ್ನು ನಿರ್ಮಿಸಲು ನಕ್ಷೆಯಲ್ಲಿ ಅನುವು ಮಾಡಲಾಗಿದೆ.

ಆರ್.ಸಿ.ಸಿ. ರೀಟೈನಿಂಗ್ ಗೋಡೆಯನ್ನು ಒಳಗೊಂಡ ರ್‍ಯಾಂಪ್ 1:23 ಇಳಿಜಾರು, ಕೆ.ಆರ್.ಪುರಂ ಕಡೆಗೆ 225.80 ಮೀ ಉದ್ದ ಹಾಗೂ ಹೂಡಿ ವೃತ್ತದ ಕಡೆಗೆ 1:22 ಇಳಿಜಾರು, ಉದ್ದ 82.18 ಮೀ 1x5x2.50 ಮೀ ಎತ್ತರದ ಪಾದಚಾರಿ ಸಂಚಾರಕ್ಕೆ ರೈಲ್ವೆ ಹಳಿಗಳ ಮಧ್ಯೆ ರೈಲ್ವೆ ಕೆಳಸೇತುವೆಯನ್ನು ಸಹ ಅಳವಡಿಸಲಾಗಿದೆ. ಇದೇ ರೀತಿ ಕೆ.ಆರ್.ಪುರಂ ಕಡೆ ನಿರ್ಮಿಸಲು ಉದ್ದೇಶಿಸಿರುವ ರೀಟೈನಿಂಗ್‌ವಾಲ್ ಮಧ್ಯೆ ಒಂದು ಲಘು ವಾಹನಗಳ ಸಂಚಾರಕ್ಕೆ 1x6x3.00 ಮೀ ಎತ್ತರದ ಆರ್.ಸಿ.ಸಿ. ಬಾಕ್ಸ್‌ನ್ನು ಅಳವಡಿಸಲು ಉದ್ದೇಶಿಸಿದೆ. ನಕ್ಷೆಯಲ್ಲಿ ಸೇತುವೆಯ ಕೆಳಗಡೆ 5 ಮೀ ಅಗಲದ ಸರ್ವೀಸ್ ರಸ್ತೆಗಳನ್ನು ಸಹಾ ನಿರ್ಮಿಸಲು ಉದ್ದೇಶಿಸಲಾಗಿದೆ.

ಈ ಎಲ್ಲಾ ಕಾಮಗಾರಿಗಳನ್ನು ಒಳಗೊಂಡ ಯೋಜನೆಯನ್ನು ನಿರ್ಮಿಸಲು ಜಿ.ಎ.ಡಿಯ ಪ್ರಕಾರ ಸುಮಾರು 1.10 ಎಕರೆಗಳಷ್ಟು ಭೂ ಸ್ವಾಧೀನ ಪ್ರಕ್ರಿಯೆ ಅಗತ್ಯವಿರುತ್ತದೆ.

ನೈರುತ್ಯ ರೈಲ್ವೆ ಇಲಾಖೆಯವರು ದಿನಾಂಕ:25-05-2010 ರಂದು ಕಾಮಗಾರಿ ಕೆಲಸಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಪಾಲಿಕೆಯ ಅನುಮೋದನೆಯನ್ನು ಕೋರಿರುತ್ತಾರೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

ಸೇತುವೆ ನಿಮಾಣ, ಅಪ್ರೋಚ್ ರಸ್ತೆ ನಿರ್ಮಾಣ ಮತ್ತು ಯುಟಿಲಿಟಿ ಸ್ಥಳಾಂತರ ಇತ್ಯಾದಿಗಳನ್ನು ರೈಲ್ವೆ ನಿಯಮಗಳಿಗನುಗುಣವಾಗಿ ತಯಾರಿಸಿರುವ ಅಂದಾಜು ಪಟ್ಟಿಯ ಮೊತ್ತ ರೂ.15,80,75,874.00ಗಳಿಗೆ ಪಾಲಿಕೆಯ ಅನುಮೋದನೆಯನ್ನು ದೃಢೀಕರಿಸುವ ಸಲುವಾಗಿ ಮೇಲುರುಜು ಮಾಡಿ ಕಳುಹಿಸಿಕೊಡಲು ಕೋರಿರುತ್ತಾರೆ. ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ ಸಾರ್ವಜನಿಕ ಸಂಪರ್ಕಗಳ ಸ್ಥಳಾಂತರಕ್ಕೆ ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಮೊತ್ತವು ತೀರ ಕಡಿಮೆಯಾಗಿರುವುದು ಕಂಡು ಬಂದಿದೆ.

ಅಂದಾಜು ಪಟ್ಟಿಯಲ್ಲಿ ಯೋಜನೆಗೆ ಅಗತ್ಯವಾದ ಖಾಸಗಿ ಭೂಮಿಯನ್ನು ವಶಪಡಿಸಿಕೊಳ್ಳಲು ಅನುದಾನವನ್ನು ಸಂಪೂರ್ಣವಾಗಿ ಸೇರಿಸಿಕೊಂಡಿರುವುದಿಲ್ಲ. ಆದಕಾರಣ, ಈ ಕೆಳಕಂಡ ಕಾಮಗಾರಿಗಳ ನಿರ್ವಹಣೆಯನ್ನು ಪಾಲಿಕೆಯ ವತಿಯಿಂದ ವಹಿಸಬೇಕಾಗಿರುವುದರಿಂದ ರೂ.2.00 ಕೋಟಿಗಳ ಪ್ರಾರಂಭಿಕ ಅನುದಾನವನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ, ಘೋಶ್ವಾರೆ ಅಂದಾಜು ಪಟ್ಟಿಯನ್ನು ರೂ.19,00,00,000.00 ಗಳಿಗೆ ತಯಾರಿಸಿದ್ದು, ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| **ಭಾಗ – I** | | |
| 1 | ರೈಲ್ವೆ ಇಲಾಖೆಯ ಅಂದಾಜು ಮೊತ್ತ (ಮೇಲ್ಸೇತುವೆ ಹಾಗೂ ಅಪ್ರೋಚ್ ರಸ್ತೆಯ ನಿರ್ಮಾಣ ಕಾಮಗಾರಿಗೆ) | 15,80,75,874.00 |
| | ಒಟ್ಟು | **15,80,75,874.00** |
| **ಭಾಗ – II** | | |
| 1 | ಭೂಸ್ವಾಧೀನ ಪ್ರಕ್ರಿಯೆ ಮೊತ್ತ | 2,00,00,000.00 |
| 2 | ಬಾಕ್ಸ್ ಮತ್ತು ಅಪ್ರೋಚ್ ರಸ್ತೆಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಅಗತ್ಯವಿರುವ ಮೊತ್ತ | 10,00,000.00 |
| 3 | ನಾಗರೀಕ ಸೌಲಭ್ಯಗಳ ಸ್ಥಳಾಂತರಕ್ಕೆ ಅಗತ್ಯವಿರುವ ಮೊತ್ತ | 1,00,00,000.00 |
| 4 | ಸಾಧಿಲ್ವಾರು ಮತ್ತು ಇತರೆ ಮೊತ್ತ | 9,24,126.00 |
| | ಒಟ್ಟು | **3,19,24,126.00** |
| | **ಒಟ್ಟಾರೆ ಮೊತ್ತ** | **19,00,00,000.00** |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.19.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ.
2. ನೈರುತ್ಯ ಇಲಾಖೆಯವರು ತಯಾರಿಸಿ ಸಲ್ಲಿಸಿರುವ ಜಿ.ಎ.ಡಿಗೆ ಅನುಮೋದನೆ.
3. ಯೋಜನೆಗೆ ಅಗತ್ಯವಿರುವ 1.10 ಎಕರೆ ಖಾಸಗಿ ಭೂಮಿಯನ್ನು ವಶಪಡಿಸಿಕೊಳ್ಳಲು ಭೂಸ್ವಾಧೀನ ಪ್ರಕ್ರಿಯೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದನೆ.
4. ಪಾಲಿಕೆ ವತಿಯಿಂದ ನಿರ್ವಹಿಸಬಹುದಾದ ಅಂದಾಜು ಪಟ್ಟಿಯ ಮೊತ್ತ ರೂ.3,19,24,126.00 ಗಳಿಗೆ ಆಡಳಿತಾತ್ಮಕ ಅನುಮೋದನೆ.
5. ಸದರಿ ಯೋಜನೆಯ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ.
6. ಸದರಿ ಯೋಜನೆಗೆ ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ಅಂದಾಜು ಪಟ್ಟಿಗೆ ಮೇಲುರುಜು ಮಾಡಿ ನೈರುತ್ಯ ರೈಲ್ವೆಗೆ ಸಲ್ಲಿಸಲು ಅನುಮೋದನೆ.

ಮೇಲ್ಕಂಡ ಆರು (6) ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21-07-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:21-07-2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಸಿ.ಕೆ.ರಾಮಮೂರ್ತಿರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ಆಯುಕ್ತರವರ ದಿನಾಂಕ:21-07-2010 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು